**ಶ್ರೀ ಟಿ.ಬಿ. ಜಯಚಂದ್ರ** :- Horticulture University, Agricultre University Bill pass ಮಾಡುವ ಬಗ್ಗೆ ನಮ್ಮದೇನು ಅಭ್ಯಂತರವಿಲ್ಲ. ಯಾವ Act ಪ್ರಕಾರ ಆಗಬೇಕು?

**ಅಧ್ಯಕ್ಷರು** :- ಪರ್ಯಾಲೋಚನೆ ಮಾಡುವ ಸಂದರ್ಭದಲ್ಲಿ ನೀವು ಈ ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿ. ವಿಷಯದ ಬಗ್ಗೆ ಮಂಡನೆ ಮಾಡಲು ನಾನು ಅವಕಾಶ ಕೊಡುತ್ತೇನೆ.

**(ಇ) ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ ವಿಧೇಯಕ, 2009**

**ಮಂಡನೆಗೆ ಅನುಮತಿ ಕೋರಿಕೆ**

**ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು) (ತೋಟಗಾರಿಕಾ ಸಚಿವರ ಪರವಾಗಿ)** :- ಮಾನ್ಯ ಅಧ್ಯಕ್ಷರೆ: 2009 ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ,

"2009 ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನು ಮಂಡಿಸಲು ಅನುಮತಿ ನೀಡುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ಪೌರಾಡಳಿತ ಸಚಿವರು) (ತೋಟಗಾರಿಕಾ ಸಚಿವರ ಪರವಾಗಿ)** :- ಮಾನ್ಯ ಅಧ್ಯಕ್ಷರೆ, 2009 ರ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಅಧ್ಯಕ್ಷರು** :- ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ - 3)